ಓ ಎಸ್ ನಂ.553/2014

ಪಿ.ಡಬ್ಲ್ಯೂ1

ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ದಿನಾಂಕಃ 08-04-2021.

ಪಾಟೀ ಸವಾಲು ಃ- ಶ್ರೀ ಎಂ ಆರ್ ಸಿ ವಕೀಲರಿಂದ

ನನ್ನ ತಾತನ ಹೆಸರು ಮರೀಗೌಡ. ನನ್ನ ಮುತ್ತಾತನ ಹೆಸರು ರಾಮೇಗೌಡ .ದಾವಾ ಸ್ವತ್ತುಗಳ ದಾಖಲೆಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿದೆ . ದಾವಾ ಸ್ವತ್ತುಗಳನ್ನು ಹೊರತುಪಡಿಸಿ ಬೇರೆ ಸ್ವತ್ತುಗಳು ನಮ್ಮ ಕುಟುಂಬಕ್ಕೆ ಇಲ್ಲಾ . ಸಾಕ್ಷಿಯು ಮುಂದುವರೆದು ನಮ್ಮ ಕುಟುಂಬಕ್ಕೆ ಗ್ರಾಮ ಠಾಣೆಗೆ ಸೇರಿದ ಸ್ವತ್ತು ಇದೆ ಎಂದು ನುಡಿಯುತ್ತಾರೆ . ಸದರಿ ಸ್ವತ್ತು ನನ್ನ ತಾತ ಮರೀಗೌಡರವರ ಹೆಸರಿನಲ್ಲಿದೆ . ಸದರಿ ಸ್ವತ್ತನ್ನು ಈ ದಾವೆಯಲ್ಲಿ ಸೇರಿಸಿದ್ದೇನೆ . ಅದರ ವಿಸ್ತೀರ್ಣ ಗೊತ್ತಿಲ್ಲ. ನಾನು ಒಂದು ಮನೆಯಲ್ಲಿ ವಾಸವಾಗಿದ್ದೇನೆ . 50 ಇಂಟು 24 ಅಡಿ ಇದೆ . ಸದರಿ ಸ್ವತ್ತನ್ನು ನನ್ನ ತಂದೆಗೆ ನನ್ನ ಮಾವ ಮಾರಾಟಮಾಡಿದ್ದಾರೆ . ಸದರಿ ಸ್ವತ್ತನ್ನು ಕ್ರಯಕ್ಕೆ ಪಡೆದು ಸುಮಾರು 40 ವರ್ಷಗಳಾಗಿವೆ . ಸದರಿ ಸ್ವತ್ತನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಸದರಿ ಸ್ವತ್ತನ್ನು ಈ ದಾವೆಯಲ್ಲಿ ಸೇರಿಸಲು ತೊಂದರೆ ಇಲ್ಲ. ನನ್ನ ಮುತ್ತಾತ ರಾಮೇಗೌಡರವರ ಹೆಸರಿನಲ್ಲಿ ಆಸ್ತಿಗಳು ಇರುವ ಬಗ್ಗೆ ದಾಖಲೆಗಳನ್ನು ನೋಡಿದ್ದೇನೆ .

ನನ್ನ ತಾತ ಮರೀಗೌಡರಿಗೆ 7 ಜನ ಮಕ್ಕಳು 2 ಹೆಣ್ಣು ಐದು ಗಂಡು. ಅವರುಗಳೆಂದರೆ ರಂಗೇಗೌಡ , ನಾಗೇಗೌಡ , ರಾಮೇಗೌಡ , ಶಂಕರೇಗೌಡ ,ಕುಮಾರ , ವರಲಕ್ಷ್ಮಮ್ಮ ಮತ್ತು ಕನಕಮ್ಮ . ವರಲಕ್ಷ್ಮಮ್ಮನನ್ನು ಸಣ್ಣೇನಹಳ್ಳಿಗೆ ಮದುವೆಮಾಡಿದ್ದಾರೆ ಅವರ ಬಗ್ಗೆ ಗೊತ್ತು . ಕನಕಮ್ಮ ವಡ್ಡರಹಳ್ಳಿಗೆ ಮದುವೆಮಾಡಿದ್ದಾರೆ ಆಕೆ ಬದುಕಿದ್ದಾರೆ . ಈ ಮೊದಲು ನಾನು ಮತ್ತು ನನ್ನ ತಾಯಿ 593ಃ2013 ನ್ನು ಸಲ್ಲಿಸಿದ್ದೆವು ಎಂದರೆ ಸರಿ . ಸದರಿ ದಾವೆಯನ್ನು ವಾಪಸ್ ಪಡೆದುಕೊಳ್ಳಲಾಯಿತು . ಸದರಿ ದಾವೆಯನ್ನು ತೀರ್ಮಾನಮಾಡಿಕೊಳ್ಳಲು ವಾಪಸ್ ತೆಗೆದುಕೊಂಡಿರುತ್ತೇವೆ . ಈ ಸಂಬಂಧ ಯಾವುದೇ ಬರವಣಿಗೆ ಆಗಿರಲಿಲ್ಲ. ಸದರಿ ದಾವೆಯಲ್ಲಿ ಸರ್ವೆ ನಂ.28ಃ1 ರ 1 ಎಕರೆ 20 ಗುಂಟೆ ಜಮೀನನ್ನು ಸೇರಿಸಿದ್ದೆವು. ಸದರಿ ಸ್ವತ್ತಿಗೆ ಮಾತ್ರ ಮೇಲ್ಕಂಡ ದಾವೆಯನ್ನು ಸಲ್ಲಿಸಿದ್ದೆವು. ವಾಪಸ್ ಪಡೆಯುವ ಕಾಲಕ್ಕೆ ನಮ್ಮ ಕುಟುಂಬದ ಸದಸ್ಯರನ್ನು ಸೇರಿಸಿಲ್ಲ ಎಂದು ಅರ್ಜಿಯಲ್ಲಿ ಬರೆದಿಲ್ಲ.

ಐಟಂ ನಂ.1 ರ ಸ್ವತ್ತನ್ನು 1 ನೇ ಪ್ರತಿವಾದಿ ದಿನಾಂಕ 27-11-1978 ರಲ್ಲಿ ಕ್ರಯಕ್ಕೆ ಪಡೆದಿದ್ದಾರೆ ಎಂದರೆ ಸಾಕ್ಷಿಯು ಒಟ್ಟು ಕುಟುಂಬದ ಪರವಾಗಿ ಪಡೆದಿದ್ದಾರೆ ಎಂದು ನುಡಿಯುತ್ತಾರೆ . ಆ

ಸಮಯಕ್ಕೆ ನಾನು ಜನಿಸಿರಲಿಲ್ಲ. ನಾನು 1984 ರಲ್ಲಿ ಜನಿಸಿದ್ದೇನೆ . ನನ್ನ ತಾಯಿಗೆ ನಾನು ಎರಡನೇ ಮಗ . ನಾನು ಮತ್ತು ನಮ್ಮ ಚಿಕ್ಕಪ್ಪದೊಡ್ಡಪ್ಪಂದಿರು ಸುಮಾರು 30 ವರ್ಷಗಳಿಂದ ಬೇರೆ ಬೇರೆ ವಾಸವಾಗಿದ್ದೇವೆಂದರೆ ಸರಿ . ನನ್ನ ತಾಯಿ ಆರೋಗ್ಯವಾಗಿದ್ದಾರೆ . ನ್ಯಾಯಾಲಯಕ್ಕೆ ಹಾಜರಾಗಬಹುದು. ಸಾಕ್ಷಿಯು ಮುಂದುವರೆದು ಸುಮಾರು 15-20 ದಿನಗಳ ಹಿಂದೆ ಕಣ್ಣಿನ ಶಸ್ತ್ರಚಿಕಿತ್ಸೆ ಆಗಿದೆ ಎಂದು ನುಡಿಯುತ್ತಾರೆ .

ಈ ಮೊದಲು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ತೊಂದರೆ ಇರಲಿಲ್ಲ. ನನ್ನ ತಂದೆಯ ಸಹೋದರಿಯರನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಐಟಂ ನಂ.3 ರ ಸ್ವತ್ತು 1 ನೇ ಪ್ರತಿವಾದಿಗೆ ಸರ್ಕಾರದಿಂದ ಮಂಜೂರಾಗಿದೆ ಎಂದರೆ ಸರಿ . ಸದರಿ ಸ್ವತ್ತಿನ ದಾಖಲೆಯನ್ನು ನೋಡಿಲ್ಲ.

ಕಾಳೇಗೌಡರವರ ಮಗ ಚಂದ್ರೇಗೌಡ ಗೊತ್ತು ಸದರಿಯವರು ನನ್ನ ಮಾವ . ಸದರಿಯವರು ನನ್ನ ಹೆಂಡತಿಯ ಚಿಕ್ಕಪ್ಪ . ಚಂದ್ರೇಗೌಡರಿಗೆ ಐಟಂ ನಂ.1 ರ ಸ್ವತ್ತಿನ ಪೈಕಿ ದಿನಾಂಕ 13-5-2005 ರಲ್ಲಿ 1 ನೇ ಪ್ರತಿವಾದಿ ಮತ್ತು ಆತನ ಮಗ ಗಿರೀಶ ಮಾರಾಟಮಾಡಿದ್ದಾರೆ ಎಂದರೆ ಸರಿ . ಈ ಬಗ್ಗೆ ನಾನು ದಾಖಲೆಯನ್ನು ನೋಡಿಲ್ಲ. ಸದರಿ ವಿಷಯವನ್ನು ವಾದ ಪತ್ರದಲ್ಲಿ ಹೇಳಿಲ್ಲ ಸದರಿಯವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ಸದರಿ ಕ್ರಯಪತ್ರಕ್ಕೆ ನನ್ನ ತಂದೆ ಸಾಕ್ಷಿದಾರರಾಗಿ ಸಹಿ ಹಾಕಿದ್ದಾರೆ ಎಂದರೆ ಸರಿಯಲ್ಲ.

ನನ್ನ ತಾಯಿ ಚನ್ನರಾಯಪಟ್ಟಣದ ತಹಶೀಲ್ದಾರ್ ರವರಿಗೆ ಖಾತೆಮಾಡಿಕೊಡುವಂತೆ ಅರ್ಜಿ ನೀಡಿದ್ದರು ಎಂದರೆ ಸರಿ . ನಾಗಸಮುದ್ರ ಸರ್ವೆ ನಂ.130/3 ಎ ರಲ್ಲಿ 1 ಎಕರೆ 37 ಗುಂಟೆಗೆ ಅರ್ಜಿ ನೀಡಿದ್ದರು ಎಂದರೆ ಸರಿ . ಸದರಿ ಸ್ವತ್ತು ಬೊಮ್ಮೇಗೌಡ ಬಿನ್ ನಾಗೇಗೌಡರವರ ಹೆಸರಿನಲ್ಲಿ ಇತ್ತು . ಸದರಿ ಕೇಸ್ ನಂ. ಆರ್ ಆರ್ ಟಿ (ವಿ) 50/2016-17 ಎಂದರೆ ಸರಿ . ಸದರಿ ಪ್ರಕರಣದಲ್ಲಿ ವಂಶವೃಕ್ಷ ನೀಡಿದ್ದೇ ಎಂದರೆ ಸರಿ . ಸದರಿ ಅರ್ಜಿಗೆ ಪ್ರತಿವಾದಿಗಳು ತಕರಾರು ಸಲ್ಲಿಸಿದ್ದರು ಎಂದರೆ ಸರಿ . ಸದರಿ ಅರ್ಜಿ ವಜಾ ಆಗಿದೆ ಎಂದರೆ ಸರಿಯಲ್ಲ.

ನನ್ನ ತಂದೆ ಆರ್ ಎ 4/2013-14 ನ್ನು ಎ ಸಿ ನ್ಯಾಯಾಲಯದಲ್ಲಿ ಸರ್ವೆ ನಂ.130/2 ರಲ್ಲಿ 22 ಗುಂಟೆ , ಸರ್ವೆ ನಂ.130/3 ಎ , ರಲ್ಲಿ 1 ಎಕರೆ 37 ಗುಂಟೆ , ಸರ್ವೆ ನಂ.130/5 ರಲ್ಲಿ 14 ಗುಂಟೆ ಸ್ವತ್ತುಗಳನ್ನು ನನ್ನ ತಂದೆಯ ತಾತ ನಾಗೇಗೌಡರ ಹೆಸರಿನಲ್ಲಿದ್ದುದ್ದನ್ನು ಖಾತೆಮಾಡಿಕೊಡುವಂತೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ . ಸದರಿ ಅರ್ಜಿ ಏನಾಗಿದೆ ಎಂದು ಗೊತ್ತಿಲ್ಲ. ಸದರಿ ಅರ್ಜಿಯು

ಓ ಎಸ್ ನಂ.553/2014

ಪಿ.ಡಬ್ಲ್ಯೂ1

3-9-2014 ರಲ್ಲಿ ವಜಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರವನ್ನು ಈ ದಾವೆಯಲ್ಲಿ ಹೇಳಿಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ಸಮಯವಕಾಶ ಕೋರಿದ್ದು ನೀಡಲಾಯಿತು .

(ಮುಕ್ತ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.,

(ಎಸ್.ಚೆನ್ನಸ್ವಾಮಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ.